**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.31/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | ಹನುಮವ್ವ ಅಣಜಿ | ಸಿಡಬ್ಲ್ಯೂ | 6 |
| ಗಂಡನ ಹೆಸರು | ಚನ್ನಪ್ಪ | ಪಿಡಬ್ಲ್ಯೂ | 7 |
| ವಯಸ್ಸು | 60 ವರ್ಷ | | |
| ಉದ್ಯೋಗ | ಗೃಹಿಣಿ | | |
| ವಾಸಸ್ಥಳ | ಗಣಜೂರ | | |

ದಿಃ **07.07.2025** ರಂದು ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಪ್ರಭಾರ ಹಿ.ಸ.ಸ.ಅಭಿಯೋಜಕರಿಂದ.

**1).** ಚಾ.ಸಾ-1 ನನ್ನ ದತ್ತಕ ಮಗನಾಗಬೇಕು. ಚಾ.ಸಾ-7 ಬಸವರಾಜ ನನಗೆ ಸಂಬಂಧಿಕನಾಗಬೇಕು. ನಮ್ಮ ತಂದೆಯ ಹೆಸರು ಧ್ಯಾಮಣ್ಣ ಅಂತಾ ಇರುತ್ತದೆ. ನನ್ನ ತಂದೆಗೆ 05 ಎಕರೆ ಆಸ್ತಿಯು ಗಣಜೂರ ಗ್ರಾಮದಲ್ಲಿ ಇರುತ್ತದೆ. ಈಗ ಐದು ವರ್ಷದ ಹಿಂದೆ ಈ ಪ್ರಕರಣದಲ್ಲಿ ಹೇಳಿದಂತಹ ಘಟನೆ ನಡೆದಿರುತ್ತದೆ. ಈ ಪ್ರಕರಣದಲ್ಲಿ ನಡೆದಂತಹ ಘಟನೆಯ ಬಗ್ಗೆ ಮಾಹಿತಿ ಇರುವದಿಲ್ಲ. ಪೊಲೀಸರ ಮುಂದೆ ನಾನು ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿರುವದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಪರಿಶೀಲಿಸಿ ಅನುಮತಿ ನೀಡಲಾಯಿತು).

ಪಾಟೀ ಸವಾಲುಃ ಪ್ರಭಾರ ಮಾನ್ಯ ಹಿರಿಯ ಸರ್ಕಾರಿ ಅಭಿಯೋಜಕರಿಂದಃ

**2)** ನನ್ನ ತಂದೆಗೆ ಸೇರಿದ ಗಣಜೂರಿನಲ್ಲಿ ಎರಡು ಸರ್ವೆ ನಂಬರಗಳಾದ 111/2ಅ/2 02 ಎಕರೆ 04 ಗುಂಟೆ ಹಾಗೂ ಅದೇ ರೀತಿ ಇನ್ನೊಂದು ಸರ್ವೆ ನಂಬರಾದ 111/2ಅ/1 02 ಎಕರೆ 04 ಗುಂಟೆ ಜಮೀನುಗಳು ಇದ್ದವು ಅಂದರೆ ಸರಿ. ಸದರಿ ಆಸ್ತಿಗಳನ್ನು ಸಿದ್ದಪ್ಪ ಮತ್ತು ಸಿದ್ದಪ್ಪನ ಮಕ್ಕಳು ಸಾಗುವಳಿ ಮಾಡುತ್ತಿದ್ದರು. ತಹಶೀಲ್ದಾರ ಕಛೇರಿಯಲ್ಲಿ ಪ್ರಕರಣ ನಡೆದಾಗ ಮೋಟಾರ ಸೈಕಲ್ ಮೇಲೆ ನನ್ನನ್ನು ಜಲ್ಲಾಪುರದವರು ಕೂಡಿಸಿಕೊಂಡು ಅಪಹರಿಸಿಕೊಂಡು ಹೋಗಿರುತ್ತಾರೆ. ನಂತರ ಜಲ್ಲಾಪುರದವರ ಮನೆಯಲ್ಲಿ ಎರಡು ದಿವಸ ಇಟ್ಟುಕೊಂಡಿದ್ದು, ಆ ಬಳಿಕ ಪೊಲೀಸರು ಬಂದು ನನ್ನನ್ನು ಬಿಡಿಸಿಕೊಂಡು ಬಂದು

ಹೋಗಿರುತ್ತಾರೆ. ಈ ಕುರಿತಾಗಿ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ನಂತರ ಪ್ರಕರಣ ನಡೆದಾಗ ನನ್ನ ಮಗನನ್ನು ಸಹ ಹೊಡೆದಿರುತ್ತಾರೆ.

ಪಾಟೀ ಸವಾಲುಃ ಶ್ರೀ.ಎಂ.ಸಿ.ಹೆಚ್ ವಕೀಲರಿಂದಃ ಆರೋಪಿತರ ಪರವಾಗಿಃ

**3)** ನಾನು ಈಗ 5 ವರ್ಷದಿಂದ ಗಣಜೂರ ಗ್ರಾಮದಲ್ಲಿ ವಾಸವಾಗಿದ್ದೇನೆ. ಆ ಮೊದಲು ನಾನು ಸೊರಬ ತಾಲೂಕಿನ ಆನವಟ್ಟಿ ಗ್ರಾಮದಲ್ಲಿ ಇದ್ದೆ ಅಂದರೆ ಸರಿ. ಆನವಟ್ಟಿಯಲ್ಲಿ ನನ್ನ ಗಂಡನ ಹೆಸರು ಮುರಿಗೆಪ್ಪ ಅಂತಾ ಇತ್ತು ಅಂದರೆ ಸರಿ. ನನ್ನ ಮನೆ ಆನವಟ್ಟಿಯಲ್ಲಿ ಶಿರಾಳಕೊಪ್ಪ ರಸ್ತೆಯಲ್ಲಿ ಇರುತ್ತದೆ ಅಂದರೆ ಸರಿ. ನನ್ನ ಚುನಾವಣೆ ಗುರುತಿನ ಚೀಟಿಯಲ್ಲಿನ ವಿಳಾಸ ಮತ್ತು ನನ್ನ ಆಧಾರಕಾರ್ಡನಲ್ಲಿ ಇರುವಂತಹ ವಿಳಾಸ ಮತ್ತು ನನ್ನ ರೇಷನ ಕಾರ್ಡನಲ್ಲಿ ಇರುವಂತಹ ವಿಳಾಸದಲ್ಲಿ ನನ್ನ ಹೆಸರು ಶಾಂತಮ್ಮ ಕೋಂ ಮುರಿಗೆಪ್ಪ ಅಂತಾ ಇತ್ತು ಅಂದರೆ ಸರಿ. ಸಾಕ್ಷಿಯು ಮುಂದುವರೆದು ಅದನ್ನು ಈಗ ಬದಲಾವಣೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ಕಾರದಿಂದ ಬರುವ 60 ವರ್ಷದ ಬಳಿಕ ಕೊಡುವಂತಹ ಪಿಂಚಣಿಯಲ್ಲಿ ನನ್ನ ಹೆಸರು ಶಾಂತಮ್ಮ ಕೋಂ ಮುರಿಗೆಪ್ಪ ಎಂದು ತೆಗೆದುಕೊಳ್ಳುತ್ತೇನೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಗಂಡನ ಹೆಸರು ಚೆನ್ನಪ್ಪ ಎಂದು ನುಡಿಯುತ್ತಾರೆ.

**4)** ಚೆನ್ನಪ್ಪ ಈತನಿಗೆ ಪಾರವ್ವ ಎನ್ನುವ ಮೊದಲನೇ ಹೆಂಡತಿ ಇರುತ್ತಾಳೆ ಅಂದರೆ ಸರಿ. ನಾನು ನನ್ನ ಚೆನ್ನಪ್ಪನ ಎರಡನೇ ಹೆಂಡತಿ ಆಗಿರುತ್ತೇನೆ ಅಂದರೆ ಸರಿ. ಈಗ 5 ವರ್ಷದಿಂದ ನಾನು ಗಣಜೂರ ಗ್ರಾಮದಲ್ಲಿ ವಾಸವಾಗಿದ್ದು, ಅಲ್ಲಿ ನನ್ನ ಗಂಡನ ಹೆಸರು ಚೆನ್ನಪ್ಪ ಎಂದು ಹೇಳುತ್ತೇನೆ ಅಂದರೆ ಸರಿ. ನನ್ನ ಚಿಕ್ಕ ವಯಸ್ಸಿನಲ್ಲಿ ನಾನು ಚೆನ್ನಪ್ಪ ಈತನನ್ನು ಮದುವೆಯಾಗಿದ್ದೇನೆ, ಆದರೆ ನಾನು ಎಷ್ಟು ವರ್ಷಗಳಲ್ಲಿ ಮದುವೆಯಾಗಿದ್ದೇನೆ ಮತ್ತು ನಾನು ಎಷ್ಟು ವರ್ಷದ ಹಿಂದೆ ಮದುವೆಯಾಗಿದ್ದೇನೆ ಎಂದು ಗೊತ್ತಿಲ್ಲ. ನನ್ನ ಚುನಾವಣಾ ಗುರುತಿನ ಚೀಟಿಯಲ್ಲಿ ಮತ್ತು ನನ್ನ ಆಧಾರಕಾರ್ಡನಲ್ಲಿ ಮತ್ತು ನನ್ನ ರೇಶನಕಾರ್ಡನಲ್ಲಿ ನನ್ನ ಗಂಡನ ಹೆಸರು ಚೆನ್ನಪ್ಪ ಎಂದು ಬದಲಾವಣೆ ಮಾಡಿಸಿರುತ್ತಾರೆ, ಅದಕ್ಕಿಂತ ಮೊದಲು ನನ್ನ ಗಂಡನ ಹೆಸರು ಮುರಿಗೆಪ್ಪ ಅಂತಾಲೇ ಇದ್ದವು.

**5)** ನಾನು ತಹಶೀಲ್ದಾರ ಕಛೇರಿ ಏನು ಎಂಬುದು ಮತ್ತು ಉಪವಿಭಾಗಾಧಿಕಾರಿಗಳ ಕಛೇರಿ ಏನು ಎಂದು ನಾನು ನೋಡಿಲ್ಲ ಅಂದರೆ ಸರಿಯಲ್ಲ. ತಹಶೀಲ್ದಾರ ಕಛೇರಿಯಲ್ಲಿ ನಡೆದಂತಹ ಪ್ರಕರಣಗಳು ಮತ್ತು ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ ನಡೆದಂತಹ ಪ್ರಕರಣಗಳ ಬಗ್ಗೆ ಚೆನ್ನಪ್ಪ ಅಣಜಿಗೆ ಮಾಹಿತಿ ಇರುತ್ತದೆ

ಮತ್ತು ನನಗೆ ಅದರ ಬಗ್ಗೆ ಮಾಹಿತಿ ಇರುವದಿಲ್ಲ ಅಂದರೆ ಸರಿ. ಈ ದಿವಸ ನ್ಯಾಯಾಲಯಕ್ಕೆ ನನ್ನನ್ನು ಚೆನ್ನಪ್ಪ ಅಣಜಿ ಕರೆದುಕೊಂಡು ಬಂದಿರುತ್ತಾನೆ ಅಂದರೆ ಸರಿ ಮತ್ತು ಇದೇ ರೀತಿ ಸಾಕ್ಷಿ ಹೇಳಬೇಕು ಎಂದು ಹೇಳಿಕೊಟ್ಟಿರುತ್ತಾನೆ ಅಂದರೆ ಸರಿ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಗೊತ್ತಿಲ್ಲದೇ ಇದ್ದರೂ ಮತ್ತು ನನ್ನನ್ನು ಅಪಹರಿಸಿಕೊಂಡು ಯಾರು ಸಹ ಹೋಗಿಲ್ಲದೇ ಇದ್ದರೂ, ನಾನು ಆರೋಪಿಗಳ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮತ್ತು ಪೊಲೀಸ ಠಾಣೆಗೆ ಹೋಗಿ ಯಾವುದೇ ಹೇಳಿಕೆ ಕೊಟ್ಟಿಲ್ಲ ಅಂದರೆ ಸರಿಯಲ್ಲ ಮತ್ತು ಆರೋಪಿತರನ್ನು ಎಲ್ಲಿಯೂ ಸಹ ನೋಡಿಲ್ಲ ಅಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.